
REVIEW OF LITERATURE
ISSN: 2347-2723
IMPACT FACTOR : 2.0260 (UIF)
VOLUME - 4 | ISSUE - 7 | FEBRUARY – 2017

# ಎ.ಕೆ. ರಾಮೇಶ್ವರರ ಕಾವ್ಯಗಳಲ್ಲಿ ಮಕ್ಕಳ ಪರ ಚಿಂತನೆಗಳು

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.
ಗುಲಬರ್ಗಾ .

ಎ.ಕೆ. ರಾಮೇಶ್ವರರ ಸಮಗ್ರ ಕಾವ್ಯಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಸಂಸ್ಕೃತಿ ಶೋಧಕ್ಕೆ ಸಂಬಂಧಪಟ್ಟಿರುವ ಹಲವು ಅಂಶಗಳು ಗೋಚರಿಸುತ್ತವೆ. 'ಸಂಸ್ಕೃತಿ ಶೋಧ' ಎಂಬ ಪದ ಸಮಾಜಶಾಸ್ತ್ರದ ಪರಿಕಲ್ಪನೆಯಂತೆ ಕಂಡರು, ಇದು ಕನ್ನಡ ಸಾಹಿತ್ಯದಲ್ಲಿ ಅನ್ವಯಿಸಿದಾಗ ಸಂಪ್ರದಾಯ, ಕುಟುಂಬ, ಮನೆ, ಮಠ, ಮನೆತನದ, ಗ್ರಾಮದ ಸಂಸ್ಕೃತಿ ಹೀಗೆ ನೂರಾರು ಅಂಶಗಳನ್ನು ಒಳಗೊಂಡಿರುವಂಥದ್ದು. ಇವರು ತಮ್ಮ ಕವನ ಸಂಕಲನಗಳಲ್ಲಿ ಸಂಸ್ಕೃತಿಯ ಮೂಲ ಬೇರುಗಳನ್ನು ಹುಡುಕುತ್ತಿರುವುದು ಅಭಿವ್ಯಕ್ತಿಸುತ್ತದೆ.

ಕವಿಯು ತಮ್ಮ ಕಾವ್ಯ ಸಮಾನತೆ, ತ್ಯಾಗ, ಬಲಿದಾನ, ಸತ್ಯ, ಅಹಿಂಸೆ, ನೀತಿ–ನಿಯಮ, ಆಚಾರ–ವಿಚಾರ, ಕರುಣೆ, ಪ್ರೀತಿ, ವಿಶ್ವಾಸ, ನಮ್ಮ ನಾಡು–ನುಡಿ ಎಂಬ ಭಾವನೆ, ದೇಶಪ್ರೇಮ, ಗುರು–ಹಿರಿಯರಿಗೆ ಗೌರವ ಭಾವನೆ ಹೀಗೆ ಅನೇಕ ರೀತಿಯಲ್ಲಿ ನಮ್ಮ ಸಂಸ್ಕೃತಿಯನ್ನು ತಮ್ಮ ಕಾವ್ಯಗಳ ಮೂಲಕ ಮಕ್ಕಳಿಗೂ ಹಾಗೂ ಜನರಿಗೂ ಈ ಮೇಲಿನ ಒಂದೊಂದು ವಿಚಾರವನ್ನು ಸ್ಪಷ್ಟವಾಗಿ ಮನಮುಟ್ಟುವಂತೆ ಅತ್ಯಂತ ಸರಳವಾಗಿ ಮನದಟ್ಟು ಮಾಡುತ್ತಾರೆ.




"ಇವರೆ ನಮ್ಮ ಗುರುಗಳು
ಇವರೆ ನಾಡ ಸಿರಿಗಳು
ತಮ್ಮ ಜೀವ ತೇಯುತ
ಜಗಕೆ ಗಂಧ ತೀಡುತ" 1

ಈ ಕವನದಲ್ಲಿ ಗುರುವಿನ ಸ್ಥಾನವನ್ನು ಗುರುತಿಸುತ್ತಾರೆ. ಯಾವ ರೀತಿ ಗುರು ತನ್ನ ಜೀವನದಲ್ಲಿ ಮಕ್ಕಳ ಭವಿಷ್ಯ ರೂಪಿಸುತವಲ್ಲಿ ಕಾರ್ಯನಿರತನಾಗಿ ತನ್ನ ಸುಖವನ್ನು ಮರೆತು ಅವರನ್ನು ಒಳ್ಳೆಯ ಮಾರ್ಗ, ಒಳ್ಳೆಯ ವಿಚಾರವನ್ನು ತಿಳಿಸಿ ಈ ಜಗಕ್ಕೆ ಗಂಧವೂ ಮತ್ತು ದೇವರು ಎಷ್ಟು ಪವಿತ್ರವಾಗಿರುತ್ತದೆಯೋ ಈ ರೀತಿಯಲ್ಲಿ ಮಕ್ಕಳನ್ನು ರೂಪಿಸುವಲ್ಲಿ ಗುರು ತನ್ನ ಜೀವನವೇ ಮುಡಿಪಾಗಿಟ್ಟಿರುವುದನ್ನು ವಿವರಿಸುತ್ತಾರೆ.

"ಜೀವನ ಅರ್ಪಿಸಿ ದೇಶಗಳಿಸಿದ
ಹಿರಿಯರೆಲ್ಲರು ಉದಿಸಲಿ
ಸ್ವಾರ್ಥ ಸಾಧಕ ಮೋಸ ವಂಚಕ
ರೆಲ್ಲರಿಂದೇ ನಶಿಸಲಿ" 2

ಈ ಮೇಲಿನ ಕವನದಲ್ಲಿ ನಾಡ ಸೇವೆಗೋಸ್ಕರ ಜೀವನವನ್ನು ತ್ಯಾಗಮಾಡಿ ದೇಶವನ್ನು ಉಳಿಸಿದ ಹಿರಿಯರು ಮತ್ತೆ ಭೂಮಿಗೆ ಬರಲಿ, ಇಲ್ಲಿರುವಂತಹ ಸ್ವಾರ್ಥ, ಮೋಸ, ವಂಚನೆ ಭಾವನೆಗಳಿಗೆ ಇಗಲೇ ಕೊನೆಗೊಳ್ಳುವಂತಾಗಲಿ ಎಂಬುವುದು ತಿಳಿಸುವರು.

"ಕರಿಯರು ಬಿಳಿಯರು ಎನ್ನವುದೇತಕೆ
ಮಾನವ ಜಾತಿಯು ಒಂದಿರಲು
ಸತ್ಯ ಅಹಿಂಸೆಯ ಪಾಲಿಸಬೇಕಲೋ
ನೀತಿಯ ಜನ್ಮಕೆ ಬಂದಿರಲು" 3

ಈ ಕವನದಲಿ ಭೇದ–ಭಾವ ಮಾಡದೇ ಸಮಾನತೆಯನ್ನು ಎತ್ತಿ ತೋರಿಸುವ ಕುರಿತು ಈ ರೀತಿಯಾಗಿ ಹೇಳಿರುವರು ಕರಿಯರು–ಬಿಳಿಯರು ಎನ್ನುವುದೇತಕೆ ಮಾನವ ಜಾತಿ ಒಂದೇ ಎಂಬ ಸತ್ಯವನ್ನು ತಿಳಿ ಮನುಜ, ಸತ್ಯ ಅಹಿಂಸೆಯನ್ನು ಪಾಲಿಸುವ ಜೀವನ ನೀತಿಯುತದಿಂದ ಕೂಡಿರುವ ಬದುಕಾಗಬೇಕು ಎಂದು

ಅಭಿಪ್ರಾಯಪಡುತ್ತಾರೆ.

"ಹಳ್ಳಿಯ ಜಾತ್ರೆಗೆ ಒಳ್ಳೆಯ ಮೈತ್ರಿಗೆ
ಗೀಗಿಯ ಮೇಳವು ಬರುತಿಹುದು
ಗಂಡಿನ ಹೆಣ್ಣಿನ ಹಿರಿಮೆಯ ಸಾರುತ
ಊರಿಗೆ ಹರುಷವ ತರುತಿಹುದು" 4

ಈ ಕವನವು ಒಂದು ಹಳ್ಳಿಯ ಜಾನಪದ ಪ್ರಕಾರಗಳಲ್ಲಿ ಗೀಗೀ ಮೇಳ ಒಂದು, ಜನರು ಜಾತ್ರೆಗೆ ಬಂದು ಒಳ್ಳೆಯ ಸ್ನೇಹಿತರಿಗೇಲ್ಲ ಭೇಟಿಯಾಗಿ ಮಾತನಾಡುವುದು. ಈ ಹಾಡಿನಲ್ಲಿ ಗಂಡು–ಹೆಣ್ಣು ಇಬ್ಬರ ಹಿರಿಮೆಯನ್ನು ಹೇಳುತ್ತಾ ಊರಿನಲ್ಲಿ ಸಂತೋಷದ ವಾತಾವರಣವನ್ನು ನಿರ್ಮಿಸುವಂತಹ ಹಾಡುಗಳು ಒಂದು ರೀತಿಯಲ್ಲಿ ಹಳ್ಳಿಯಲ್ಲಿ ಜಾನಪದ ಸಂಸ್ಕೃತಿ ಇಂದಿಗೂ ಇದೆ ಎಂಬುದು ತಿಳಿದು ಬರುತ್ತದೆ.

"ನಾಳೆ ಬರುವೆನು ಎಂದು ಹೇಳಿ
ತಾಯಿ ಹೋದಳು ತವರಿಗೆ
ಹಬ್ಬ ಮುಗಿದು ತಿಂಗಳಾದರೂ
ಬಾರಳಿನ್ನೂ ಊರಿಗೆ" 5

ಈ ಕವನದಲ್ಲಿ ಮಗನು ತಾಯಿಯನ್ನು ಸ್ಮರಿಸುತ್ತಾ ತಾಯಿ ಜೀವನದಲ್ಲಿ ಮುಖ್ಯ ಎಂಬುವುದನ್ನು ತಿಳಿಸುವಂತಹದಾಗಿದೆ. ನಾಳೆ ಬರುವಳು ಎಂದು ಹೇಳಿದ ತಾಯಿಯು ಹಬ್ಬವಾಗಿ ತಿಂಗಳಾದರೂ ತವರು ಮನೆಯಿಂದ ಬರಲಿಲ್ಲ ಎಂದು ಮಗನು ಮರುಗುತ್ತಾ ತಾಯಿಯನ್ನು ನೆನೆಸುತ್ತಾ 'ಬೇಗ ಬಾ ತಾಯಿ' ಎಂದು ಮರುಗುತ್ತಿರುವುದು. ಅಂದರೆ ಇಲ್ಲಿ ಮಗು ತಾಯಿಯ ಪ್ರೀತಿ, ಕರುಣೆಗೆ, ಮಮತೆಗೆ ಹಂಬಲಿಸುತ್ತಿರುವುದು ಕಾಣುತ್ತದೆ.

"ಹಕ್ಕಿ ಹಾರುತಿದೆ
ಗಗನದಂಗಳಕೆ
ಸುಗ್ಗಿ ಸೊಗವನು ಬೀರುತ
ಇಳೆಯ ಮಾನವನ
ತನಕೆ ನೀಡಿರುವ
ಸಗ್ಗ ಸುಖವನು ಹೀರುತ" 6

ಈ ಕವನದಲ್ಲಿ ಪ್ರಕೃತಿಯ ಮಡಿಲಿನಲ್ಲಿರುವ ಹಕ್ಕಿ ಸಾಂಕೇತಿಕ ರೂಪವಷ್ಟೇ. ಹಕ್ಕಿಯು ಹಾರುತಿರುವಾಗ ಆಕಾಶದ ಅಂಗಳಕ್ಕೆ ಸುಗ್ಗಿಯ ಸಂತೋಷವನ್ನು ಬೀರುತ್ತಾ ಭೂಮಿಯ ಮೇಲಿನ ಮಾನವನು ನೀಡಿರುವ ಸ್ವರ್ಗ ಸುಖವನು ಹೀರುತ್ತಾ ತನ್ನ ಭಾಷೆಯಲ್ಲಿ ಹಾಡಿ ಹೊಗಳುವುದು ಹಕ್ಕಿ ಎಂದು ಸಾಂಕೇತಿಕ ರೂಪದಿಂದ ಸಮಸ್ತ ಜನಕೋಟಿಯ ಸಮೃದ್ಧ ಜೀವನವನ್ನು ಬಿತ್ತರಿಸುತ್ತಾರೆ.

"ಶಾಂತಿ ಮಂತ್ರ ಬಾಳ ಸೂತ್ರ
ಪಡೆದ ಜ್ಯೋತಿಯು
ಅವನೆ ನಿಜದಿ ಜ್ಞಾನ ಜ್ಯೋತಿ
ವಿಶ್ವಪ್ರೇಮಿಯು" 7

ಈ ಕವನದಲ್ಲಿ ವಿಶ್ವಪ್ರೇಮಿಯು ಹೇಗಿರಬೇಕೆಂಬುವುದನ್ನು ತಿಳಿಸಿದೆ. ಶಾಂತಿ ಎಂಬುವುದು ಮಂತ್ರವಾಗಿಸಿ ಬಾಳಿನ ಸೂತ್ರವನ್ನು ಪಡೆದು ದೀಪವು ಪ್ರಕಾಶಿಸುವಾಗ ನಿಜವನ್ನು ಮೈಗೂಡಿಸಿಕೊಂಡು ಜ್ಞಾನವೆಂಬ ಜ್ಯೋತಿಯನ್ನು ಹೊಂದಿರುವವನು ವಿಶ್ವಪ್ರೇಮಿಯಾಗುವನು ಎಂಬುದನ್ನು ಕವಿ ಸ್ಪಷ್ಟಪಡಿಸಿದ್ದಾರೆ.

"ಕಾರ್ಗಿಲ ಕದನದಲಿ ಪ್ರಾಣವನು ಪಣಕಿಟ್ಟು
ಕಾದಾಡಿ ಮಡಿದ ವೀರ ಯೋಧ
ನಿನ್ನತುಲ ಸಾಹಸಕೆ ಮೆಚ್ಚುತ್ತ ಜಗವೆಲ್ಲ ಕೊಂಡಾಡುತಿಹುದಲ್ಲ ನಿನ್ನ ತ್ಯಾಗ" 8

ಈ ಮೇಲಿನ ಕಾವ್ಯದಲ್ಲಿ ವೀರಯೋಧನೊಬ್ಬನು ಯುದ್ಧದಲ್ಲಿ ಪ್ರಾಣ ತ್ಯಾಗ ಮಾಡಿರುವುದು ಸ್ಮರಿಸುತ್ತಾ ಆತನ ಸಾಧನೆ, ಸಾಹಸಕ್ಕೆ ಜಗವು ಮೆಚ್ಚುವಂತೆ ಹೊಗಳುತ್ತಿರುವುದು. ಅವನ ಜೀವವು ಜಗಕ್ಕೆ ರಕ್ಷಣೆ ನೀಡಿ ಮಹತ್ವದಾಗಿ ಈ ದೇಶಕ್ಕೆ ತನ್ನ ಪ್ರಾಣವನ್ನು ಬಿಟ್ಟು ಈ ದೇಶ ಪ್ರೇಮವನ್ನು ತಿಳಿಸಿಕೊಟ್ಟಿರುವುದು ತಿಳಿಯುತ್ತದೆ.

"ಸತ್ಕೃತಿ ಸಂಸ್ಕೃತಿ ನಮ್ಮ ಜೀವ ಜೀವಾಳ
ಹಾರುತಿದೆ ಶಾಂತಿ ಸೂಚಕ ಪಕ್ಷಿ
ನಾವೆಲ್ಲರೊಂದು ಮನುಕುಲದ ಸಿಂಧು
ನಾವು ಏರಿರುವ ಎತ್ತರವೇ ಸಾಕ್ಷಿ" 9

ಈ ಕವನದಲ್ಲಿ ಸತ್ಕೃತಿ ಎಂಬುವುದು ಒಳ್ಳೆಯ ನಡೆ–ನುಡಿ, ಆಚಾರ–ವಿಚಾರವನ್ನು ಹೊಂದಿರುವಂತಹ ನಮ್ಮ ಸಂಸ್ಕೃತಿಯ ಜೀವಾಳವಾಗಿದೆ. ನಾವೆಲ್ಲರೂ ಒಂದೇ ಎಂಬ ಶಾಂತಿ ಮಂತ್ರವನ್ನು ಮನುಕುಲದ ಎತ್ತರವನ್ನು ತಿಳಿಸುವಂತಹದಾಗಿದೆ.

"ಸಕಲ ಜೀವರಾಶಿಗಳಿಗೆ
ಹಿತವ ನೀನು ಬಯಸಿದೆ
ಮನುಜ ಕುಲವು ಒಂದೆ ಎಂದು
ಭೇದ ಭಾವ ಅಳಿಸಿದೆ" 10

ಈ ಮೇಲಿನ ಕವನದಲ್ಲಿ ಬಸವಣ್ಣನವರು ಸಕಲ ಜೀವರಾಶಿಗಳಿಗೆ ಒಳ್ಳೆಯದನ್ನು ನೀನು ಬಯಸಿದೆ ಆದರೆ ಈ ಮನುಷ್ಯರಲ್ಲಿ ಮೇಲು–ಕೀಳು ಎಂಬ ಭೇದ–ಭಾವ ತೊಡೆದು ಹಾಕಿ ಎಲ್ಲರೂ ಒಂದೇ ಎಂಬ ಭಾವನೆಯ ಬೀಜವನ್ನು ಬಿತ್ತಿರುವುದು ತಿಳಿಯುತ್ತದೆ.

ಕವಿಯು ಈ ಮೇಲಿನ ಎಲ್ಲ ಕವನಗಳಲ್ಲಿ ತಂದೆ–ತಾಯಿಯ ಪ್ರೀತಿ, ಗುರು–ಹಿರಿಯರಿಗೆ ಗೌರವಿಸುವುದು. ಹಿರಿಯರು ಕಿರಿಯರು ಎನ್ನುವ ಭಾವನೆ, ಧರ್ಮ, ಕಾಮ ಅರ್ಥ, ಮೋಕ್ಷ, ಪ್ರಕೃತಿಯ ಸೌಂದರ್ಯ, ಕೌಟುಂಬಿಕ ಜೀವನ, ಜನಪರ ಕಾಳಜಿ, ನಾವು ನಮ್ಮವರು ಎಂಬ ಭಾವನೆ, ರಾಷ್ಟ್ರಪ್ರೇಮ, ಸ್ವಾತಂತ್ರ್ಯ ನಾಯಕರಿಗೆ ಗೌರವ, ಭಾಷೆ, ನೆಲ, ಜಲಗಳನ್ನು ಗೌರವಿಸುವುದು. ನಮ್ಮ ಸಂಸ್ಕೃತಿಯನ್ನು ಉಳಿಸುವುದಕ್ಕೆ ಮುಂದಿನ ಯುವಜನಾಂಗ ಸರ್ವರು ಕೂಡಿ ಸಂಸ್ಕೃತಯನ್ನು ಉಳಿಸಿ ಬೆಳೆಸಲು ಪ್ರಯತ್ನಿಸುವುದರಿಂದ ನವ ಸಮಾಜ ನಿರ್ಮಿಸಲು ಸಾಧ್ಯ ಎನ್ನುವುದು ಕವಿಯ ಕಾವ್ಯ ಆಶಯವಾಗಿದೆ.

ಸಮಾಜದ ಏಳ್ಗೆಗಾಗಿ ಸಾವಿರ ಸಾವಿರ ಅಂಶಗಳು ತಮ್ಮ ಸಮಗ್ರ ಮಕ್ಕಳ ಕಾವ್ಯಗಳಲ್ಲಿ ಸಂಸ್ಕೃತಿಯ ಹುಡುಕಾಟವನ್ನು ಮುಂದುವರಿಸಿದ್ದಾರೆ. ಸಮಾಜದಲ್ಲಿ ನಡೆಯುವ ಅಪರಾಧಗಳು ಮತ್ತು ಸಂಸ್ಕೃತಿಯ ಅಳಿವನ್ನು ಕಂಡು ಅವರ ಮನ ಮಿಡಿಯುತ್ತದೆ. ಆದ್ದರಿಂದಲೇ ಅವರ ಬರವಣಿಗೆ ಮುಖ್ಯ ವಾಹಿನಿಯಾದ ಕವನಗಳ ಮೂಲಕ ಸಮಾಜವನ್ನು ತಿದ್ದಲು, ಸಂಸ್ಕೃತಿಯನ್ನು ಉಳಿಸಲು ಸದಾ ಶ್ರಮಿಸುತ್ತಿರುವರು.

## ಮಕ್ಕಳ ಪರ ಚಿಂತನೆಗಳು

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅದರಲ್ಲಿಯೂ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸುಮಾರು ನಾಲ್ಕು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಸಾಹಿತ್ಯ ಸೇವೆಯನ್ನು ಮಾಡುತ್ತಾ ಬಂದಿರುವ ಎ.ಕೆ. ರಾಮೇಶ್ವರರು ಶ್ರೇಷ್ಠ ಕವಿಗಳಲ್ಲೊಬ್ಬರು. ಇವರು ಕವನಗಳನ್ನು ಕ್ರೋಢೀಕರಿಸಿ 'ಸಮಗ್ರ ಕಾವ್ಯ' ಕೃತಿಯನ್ನು ಹೊರತಂದಿದ್ದಾರೆ. ಈ ಕವನ ಸಂಕಲನದಲ್ಲಿ ಐದು ನೂರಕ್ಕೂ ಹೆಚ್ಚು ವೈವಿಧ್ಯ ಪೂರ್ಣ ಮಕ್ಕಳಿಗೆ ಪ್ರೀಯವಾಗುವ ಕವನಗಳಿವೆ. ಮಕ್ಕಳಿಗೆ ಇಷ್ಟವಾಗುವ ವಸ್ತುಗಳಿಗೆ ಅನುಗುಣವಾದ ಕವನಗಳನ್ನು ರಚಿಸಿರುವುದಕ್ಕೆ ಮಹತ್ವವೆಂದೆನಿಸುತ್ತದೆ. ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಅವರ ಬುದ್ಧಿಯನ್ನು ತಿಳಿಯಾಗಿಸುವುದಲ್ಲದೆ ಕನ್ನಡ ಆಡು ಮಾತುಗಳಲ್ಲೇ ಕವನ ರಚಿಸಿ ಮಕ್ಕಳನ್ನು ಮುದಗೊಳಿಸಿದ್ದಾರೆ.

ಮಕ್ಕಳಕಾವ್ಯ ಪ್ರವೇಶ ಮಾಡಿಸುವವರು ಕಲಿತುಕೊಳ್ಳಬೇಕಾದ ಕಲೆ ಎ.ಕೆ. ರಾಮೇಶ್ವರರವರಿಗೆ ದೇವರು ಕೊಟ್ಟವರವಾಗಿ ಬಂದಿದೆ. ಕೇವಲ ಮಕ್ಕಳ ಸಾಹಿತ್ಯದಲ್ಲಿ ಅಲ್ಲದೇ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಜಾನಪದ ಸಾಹಿತ್ಯದಲ್ಲಿ ವಿಶೇಷವಾಗಿ ಇವರ

ಮಕ್ಕಳ ಸಾಹಿತ್ಯ ಕೃತಿಗಳಿಗೆ ರಾಜ್ಯ ಪ್ರಶಸ್ತಿ ಲಭಿಸಿವೆ. "ನಂದಿಕೋಲು" ಎನ್ನುವ ಮಕ್ಕಳ ಕೃತಿಯಲ್ಲಿಯೇ ಮಕ್ಕಳ ಮೇಳ ನಡೆಯಲಿ ಅಲ್ಲಿ ಅದು ಮುಂದಿರುತ್ತದೆ ಎಂಬ ಅಭಿಮಾನಿಗಳು ಹೆಮ್ಮೆಯಿಂದ ಹೇಳುತ್ತಾರೆ.

ಇವರು ಇದುವರೆಗೆ ಪ್ರಕಟಿಸಿರುವ ಕವನ ಸಂಕಲನಗಳಲ್ಲಿ ಮಹತ್ವ ಪಡೆದಂತಹ ಕೆಲವು "ನಂದಿಕೋಲು", "ವಸಂತ ಬಂದ", "ಬನ್ನಿರಿ ಮನುಕುಲ ಚಂದಿರರೆ", "ಹಕ್ಕಿ ಹಾರುತಿದೆ", "ಚಂದ್ರ ಮೂಡಿ ಬಂದ", "ಹುಲಿಯ ಹಾಲಿನ ಗಿಣ್ಣ", "ಚೆಲುವು ಕನ್ನಡ ನಾಡು" ಇನ್ನೂ ಮುಂತಾದ ಕವನ ಸಂಕಲನಗಳಿವೆ.

ನಂದಿಕೋಲಿನ ಭಾಷೆ ಬಹಳ ಸರಳವಾದರೂ ಸೊಗಸಾಗಿದೆ. ತಂದೆ–ತಾಯಿ, ಗುರು–ಹಿರಿಯರ ಒಡನಾಟದಲ್ಲಿಯೇ ಮಕ್ಕಳ ಬಾಲಲೀಲೆಗಳನ್ನು ಗುರುತಿಸಲಾಗಿದೆ. ಒಂದೆರೆಡು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದಾಗಿದೆ. ತಂದೆಯ ಕುರಿತು.

"ಹಗಲು ಇರುಳು
ದುಡಿದು ದಣಿದು
ಬಾಳಿಿಯ ರಥವ ಜಗ್ಗುವ
..........................................
..........................................
ಅಪ್ಪಿ ಮುದದಿ ಕರೆವುದು" 11

ಈ ಮೇಲಿನ ಕಾವ್ಯ ತುಂಬಾ ಸ್ವಾರಸ್ಯಕರವಾಗಿದೆ. ಬಾಳರಥವನ್ನು ಜಗ್ಗಿಕೊಂಡು ಹೋದ ತಂದೆಯನ್ನು ಅಪ್ಪ ಎಂದು ಒಪ್ಪಿ ಅಪ್ಪಿಕೊಂಡಿರುವ ರೀತಿಯನ್ನು ಮಕ್ಕಳ ರೀತಿಯಲ್ಲಿ ಹೇಳಿದ್ದು ನಿಜಕ್ಕೂ ಅಪ್ಯಾಯಮಾನವಾಗಿದೆ. ಗುರುವಂದನೆ

"ಬುದ್ಧಿಯನ್ನು ಕಲಿಸುತ
ಮಕ್ಕಳನ್ನು ತಿದ್ದುವ
ಒಳ್ಳೆ ಮೂರ್ತಿ ಕಟೆಯುತ
ಜಗಕೆ ಅವನು ನೀಡುವ" 12

ಗುರುವಿನ ಕರ್ತವ್ಯವನ್ನು ಕುರಿತು ಮನವರಿಕೆಯಾಗುವಂತೆ ತಿಳಿಸುತ್ತಾ, ಭಾವೀ ನಾಗರಿಕರನ್ನು ನಿರ್ಮಾಣ ಮಾಡುವ ಕಾರ್ಯ ಗುರುವಿನದಾಗಿದೆ. ಒಂದು ಶಿಲೆಯನ್ನು ಕಟೆದು ಶಿಲ್ಪಿ ಮೂರ್ತಿ ರೂಪಕ್ಕೆ ತರುವಂತೆ ಶಿಕ್ಷಕರು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುತ್ತಾರೆ.

ಮಕ್ಕಳಿಗಾಗಿ ಬರೆದ 'ವಸಂತ ಬಂದ' ಕವನ ಸಂಕಲನದ ಅನುಪಲ್ಲವಿಯಲ್ಲಿ ಆಟ–ಪಾಠಗಳ ಬಗ್ಗೆ ತಿಳಿಸುತ್ತಲೇ ನಾಡ ಸೇವೆಗಾಗಿ ಹುರಿದುಂಬಿಸುವಂತಹ ಕವನಗಳನ್ನು ರಚಿಸಿದ್ದಾರೆ.

"ಬನ್ನಿ ಗೆಳೆಯರೆ ನನ್ನಿಯಿಂದಲೆ
ದೇಶ ಸೇವೆ ಮಾಡಲು
ನಮ್ಮ ನಿಮ್ಮೊಳು ಮರೆತು ನಿಂತಿಹ
ಜಾತಿ ಭೇದವ ದೂಡಲು
ನಮ್ಮ ದೇಶದ ತತ್ವ ಕಾಯವ
ಸತ್ವ ಗುಣಗಳು ಬೆಳೆಯಲಿ
ತಾಯಿ ಭಾರತಿ ಮಕ್ಕಳೆಮ್ಮೊಳು
ವೈರ ಭಾವವು ಅಳಿಯಲಿ" 13

ಎಂದು ಮಕ್ಕಳಿಗೆ ಪ್ರೀತಿಯಿಂದ ಕರೆ ನೀಡುತ್ತಾರೆ. ಮಕ್ಕಳ ಭಾವನೆಯಲ್ಲಿ ಜಾತಿ ಭೇದವನ್ನು ತೋರೆದು 'ನಮ್ಮ ದೇಶ' ಭಾರತ ಮಾತೆಯ ಮಕ್ಕಳು ನಾವು, ಎಂಬ ಭಾವನೆಯನ್ನು ಬರುವಂತೆ ಸೂಕ್ಷ್ಮವಾಗಿ ಮಕ್ಕಳಿಗೆ ಕರೆ ನೀಡುತ್ತಾರೆ.

"ಹಾಯಾಗಿ ನಿನ್ನ ಹಾಲುಂಡ ಭರತ
ಭರದಿ ಎಣಿಸಿದನು ಮರಿ ಸಿಂಹದಾಹಲ್ಲು
ನಿನ್ನ ವೀರ ರಸ ಲಾಲಿಯನು ಕೇಳಿ
ಅಭಿಮನ್ಯು ತೊಟ್ಟಿಹನು ಕಣದಲ್ಲಿ ಬಿಲ್ಲು" 14

ತಾಯಿ ಎದೆ ಹಾಲುಂಡು ಗಟ್ಟಿಮುಟ್ಟಾಗಿ, ಶಕ್ತಿವಂತನಾಗಿ ಸಿಂಹದ ಹಲ್ಲನೆಣಿಸಿದನು ಹನುಮಂತನೆತ್ತಿದನು ಸಂಜೀವ ಗುಡ್ಡ "ಸಳನ ಭಲ್ಲೆಗೆ ಸಿಕ್ಕ ಹುಲಿಗೆ ಮುಕ್ತಿ" ಎಂದು ಮಕ್ಕಳ ಮುಖಾಂತರವೇ ಹೇಳಿಸುವಲ್ಲಿ ಕವಿಯ ಜಾಣ್ಮೆ ಮೂಡಿಬರುತ್ತದೆ. ಇಂತಹ ಸರಳ, ಸುಂದರ ಭಾವನೆಗಳನ್ನೊಳಗೊಂಡ "ವಸಂತ ಬಂದ" ಕಾವ್ಯ ಸಂಕಲನದಲ್ಲಿ ಕವನಗಳು ರಸವತ್ತಾಗಿ ಮೂಡಿಬಂದಿದೆ.

"ಚಂದ್ರ ಮೂಡಿ ಬಂದ" ಕವ್ಯ ಮಕ್ಕಳಿಗಾಗಿ ಬರೆದ ವಿಶಿಷ್ಟ ಕೃತಿಯಾಗಿದೆ. ಇದರಲ್ಲಿ ಪ್ರಕೃತಿ, ನಾಡು–ನುಡಿಯ ಬಗ್ಗೆ, ಮಹಾಪುರುಷರ ಉದಾತ್ತ ಜೀವನದ ಕುರಿತಾಗಿ ಬರೆದ ಹಾಡುಗಳಿವೆ. ಇದರಲ್ಲಿನ ಹಾಡುಗಳು ಕಥಾ ಕವನಗಳಂತಿದ್ದು, ಮಕ್ಕಳನ್ನು ಹಾಡಿ ಕುಣಿಯಲು ಪ್ರೇರೇಪಿಸುತ್ತವೆ. ಪ್ರತಿಯೊಂದು ಕವನ ಸಂದರ್ಭೋಚಿತವಾಗಿ ಚಿತ್ರಗಳನ್ನು ಅಳವಡಿಸಿದ್ದು ತುಂಬಾ ವಿಶಿಷ್ಟವಾಗಿದೆ. ಚಿತ್ರದ ಮೂಲಕವೇ ಹಾಡಿನ ತಾತ್ಪರ್ಯವನ್ನು ತಿಳಿಸುತ್ತಾರೆ.

ಕನ್ನಡ ನಾಡಿನ ಬಗ್ಗೆ ಹೇಳುತ್ತಾ ನಮ್ಮ ಜೀವನ ವಿಕಾಸವು ತಪ್ಪದೇ ಹಳ್ಳಿಯ ಬಾಗಿಲು ತಟ್ಟುವ ಶಿಕ್ಷಣ ಪ್ರಸಾರವಾಗಬೇಕು. ವಿಶ್ವಪ್ರೇಮ, ಸಾಕ್ಷರತೆ, ಬಂತು ಸೌಜನ್ಯ ತೋರಿ ಇಂದು ಮಾಗ್ಗೆ, ಬನ್ನಿ ಸನಿಹಕೆ, ಸಮರ ಸಾರಿದೆ ಸಾಕ್ಷರ ಮುಂತಾದ ಕವಿತೆಗಳಲ್ಲಿ ಸಾಕ್ಷರತೆಯ ಮಹತ್ವ ತಿಳಿಸಿರುವರು. "ವಿಶ್ವಪ್ರೇಮ" ಎಂಬ ಕವನದಲ್ಲಿ

"ಓದು ಬರಹ ಕೊಡಿದಲ್ಲಿ
ಬದುಕು ಚಂದನ
ಓದು ಬರಹ ಕಲಿತ ಮನುಜ
ನಿತ್ಯ ವಂದನ" 15

"ಸಾಕ್ಷರತೆ ಬಂತು ಸೌಜನ್ಯ ತೋರಿ" ಎಂಬ ಕವನದಲ್ಲಿ ಶತಮಾನದಿಂದ ಅಪಮಾನದಲ್ಲಿ ಬೆಂದಿರುವ ಜನರ ತಾಪ ಮರೆಯಾಗೋ, ಸಮಯ ಬಂದಿಹುದು ಇಂದು ಕಳೆದು ಬಡಜನರ ಶಾಪ ಎಂದು ಕವಿ ದುಃಖ ಪಡುತ್ತಾನೆ.

ಹೊಸ ಭಾವ ಭಾಷೆಗಳಲ್ಲಿ ಮಕ್ಕಳಾದಿಯಾಗಿ ಎಲ್ಲರನ್ನು ಆಕರ್ಷಿಸುತ್ತ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ಈ ರೀತಿ ಹೇಳುವರು

"ಜನರ ಹಾಡು ಕೋಲು ಕುಣಿತ
ಹಳ್ಳಿ ಸಂಸ್ಕೃತಿ
ಒಟ್ಟು ಗೂಡಿ ಕೆಲಸ ಮಾಡಿ
ನಲಿವ ಸಂಸ್ಕೃತಿ" 16

ಜನರು ಹಾಡುವುದರ ಜೊತೆ ಕೋಲು ಹಾಕುವ ಕುಣಿತ, ಹಳ್ಳಿಯ ಸಂಸ್ಕೃತಿಯನ್ನು ಎತ್ತಿ ತೋರಿಸುವುದಲ್ಲದೇ ತಮ್ಮ ಕಾರ್ಯ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಅಲ್ಲದೇ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಿದ್ದರು.

ನಮ್ಮ ನಾಡು "ಚೆಲವು ಕನ್ನಡ ನಾಡು" ಈ ಕಾವ್ಯ ಸಂಕಲನದಲ್ಲಿ ಕನ್ನಡ ನಾಡಿನ ಸಿರಿಯನ್ನು ಹೊಗಳಿರುವುದಲ್ಲದೇ ನಮ್ಮ ನಾಡು ಹೆಮ್ಮೆಯಿಂದ ಹೇಳುವಂತೆ ಇವರ ಕವನಗಳು ಸ್ಫೂರ್ತಿಯಾಗಿವೆ. ಕೆಲವು ಉದಾಹರಣೆಗಳು–

"ತಾಯಿ ನಾಡಿನ ಪಾದ ತೊಳೆಯಲು
ಹೊಳೆಯ ಹಳ್ಳಗಳೆಲ್ಲವು
ಸೊಸಿ ಹರಿದಿವೆ ತಂಪು ನೀಡುತ
ಚೆಲವು ಕನ್ನಡ ಬಲ್ಲವು" 17

ನಮ್ಮ ತಾಯಿ ನಾಡಿನ ಪಾದಕಮಲವನ್ನು ತೊಳೆಯಲು ಹೊಳೆಯು ಹಳ್ಳವು ಹತ್ತಿರ ಹರಿದು ತೊಳೆದು ಇಂಪಾದ ಗಾಳಿಯನ್ನು ಬೀರುತ್ತದೆ. ಇಂತಹ ಚೆಲುವು ಕನ್ನಡ ನಾಡನ್ನು ಬಲ್ಲವರಾಗಿದ್ದೇವೆ ಎಂದು ಕವಿ ಸಾರುತ್ತಾನೆ.

"ತಿಂಗಳ ಲೋಕದ ಅಂಗಳದಲ್ಲಿ
ಇಳೆಯ ಮಾನವನ ಅವತರಣ
ಕನಸಿನ ಲೋಕದ ನನಸನು ಕಾಣುತ
ಮಾನವ ಮಾಡಿದ ಪಾದಾರ್ಪಣ" 18

ಈ ಲೋಕದಲ್ಲಿ ಬೆಳಕನ್ನು ಇಂಪಾಗಿ ಬೀರುವ ಚಂದ್ರನು ಭೂಮಿಯ ಮೇಲೆ ಮಾನವನು ಹುಟ್ಟುವ ಮೊದಲಿದ್ದವನು, ಚಂದ್ರ ಕನಸಿನ ಲೋಕದಿಂದ ನನಸನು ಕಾಣುತ ಮನುಷ್ಯ ಧರೆಗೆ ಇಳಿದು ಬಂದಿರುವನು. ಮನುಷ್ಯನು ಭೂಮಿಯ ಮೇಲೆ ಚಂದ್ರನ ಬೆಳಕನ್ನು ಕಂಡು ಕನಸಿನ ಲೋಕದಲ್ಲಿ ನನಸನು ಎಂಬುವುದನ್ನು ತಿಳಿಯದಂತೆ ಆದ ಮಾನವ ಎಂದು ಹೇಳಬಹುದು.

'ಹಕ್ಕಿ ಹಾರುತಿವೆ' ಈ ಕವನ ಸಂಕಲನದ ಕವನಗಳ ಕೆಲವು ಉದಾಹರಣೆ – 'ಆಕಾಶ'

"ಆಗಸದ ಹಣತೆಯಲ್ಲಿ
ನಕ್ಷತ್ರ ದೀಪಗಳು
ಮಿನು ಮಿನುಗೆ ಹಲವು ಕಾಣುತಿಹವು
ಒಂದಕಿಂತಿನ್ನೊಂದು ಮಿಗಿಲಾಗಿಹೆವು"19

ಬಾನಿನಲ್ಲಿ ಹಣತೆಯ ದೀಪದಂತೆ ನಕ್ಷತ್ರದ ದೀಪಗಳು ಹೊಳೆ-ಹೊಳೆಯುತ್ತಿರುವುದು ಕಾಣುತ್ತಿದೆ. ಅದರಲ್ಲಿ ಒಂದಕ್ಕಿಂತ ಇನ್ನೊಂದು ಮಿಗಿಲಾಗಿ ಕಾಣುತ್ತಿವೆ. ಹಾಗೆ ಆಕಾಶದಲ್ಲಿ ನಕ್ಷತ್ರದ ದೀಪವು ಮಿನುಗುತ್ತಿರುವುದು ಕಾಣುತ್ತಿದೆ.

"ಹಕ್ಕಿ ಹಾರುತಿದೆ
ನೀಲಿ ಗಗನದಲಿ
ಬೆಳ್ಳಿ ಗರಿಯನು ಬಿಚ್ಚುತ
ತನ್ನ ಪಯಣಕೆ
ಶುಭವ ಕೋರಿಹ
ಭುವಿಯ ಸಖನನು ಮೆಚ್ಚುತ" 20

ಈ ಪದ್ಯದಲ್ಲಿ ಹಕ್ಕಿ ಹಾರುತಿದೆ ನೀಲಿಯ ಬಾನಲ್ಲಿ ಹಕ್ಕಿ ಅದರ ಬೆಳ್ಳಿಯ ಹಾಗೆ ಇರುವ ಗರಿಯನ್ನು ಬಿಚ್ಚಿ ಶುಭವನ್ನು ಹೇಳುತ್ತಾ ತನ್ನ ಮನ ಬಂದ ಕಡೆ ಹೋಗುತ್ತಿರುವಾಗ ಭೂಮಿಯ ಮೇಲಿನ ಗೆಳೆಯನನು ಮೆಚ್ಚುತ್ತಾ ಹರುಷದಿಂದ ಹಕ್ಕಿ ಹಾರುತ್ತದೆ ಎಂದು ಸಾದೃಶ್ಯದಿಂದ ಕವಿ ನುಡಿಯುತ್ತಾನೆ.

ಕವಿಯು ಇಂದಿನ ಮಕ್ಕಳೇ ನಾಳಿನ ಉತ್ತಮ ಪ್ರಜೆಗಳು ಮಕ್ಕಳನ್ನು ರೂಪಿಸುವಲ್ಲಿ ಉತ್ತಮರನ್ನಾಗಿ ಬೆಳೆಸಲು ಅವರ ಜ್ಞಾನ ಹೆಚ್ಚಿಸಬೇಕು. ಜ್ಞಾನವನ್ನು ವೃದ್ಧಿಸಲು ಮಕ್ಕಳ ಮನ ಮುಟ್ಟುವಂತೆ ಕಾವ್ಯಗಳನ್ನು ರಚಿಸಿ, ಆಸಕ್ತಿ, ಅಭಿರುಚಿ ಹುಟ್ಟಿಸಬೇಕು.

ಇವರು ಮಕ್ಕಳ ಸಾಹಿತ್ಯದಲ್ಲಿ ಮಹತ್ವವಾದ ಸಾಧನೆಗೈದು ಮಕ್ಕಳ ಕವಿ ಎಂದು ಪ್ರಸಿದ್ಧರಾಗಿದ್ದಾರೆ. ಇವರ ಮಕ್ಕಳ ಕವನ ಸಂಕಲನಗಳು ಔಚಿತ್ಯಪೂರ್ಣವಾಗಿ, ವೈವಿಧ್ಯಮಯವಾಗಿ, ರಸವತ್ತಾಗಿ ಮೂಡಿಬಂದಿರುವವು.

## ಅಡಿಟಿಪ್ಪಣಿಗಳು

1. **ರಾಮೇಶ್ವರ ಎ.ಕೆ. : ನಂದಿಕೋಲು** . ಪು. –31.
2. **ರಾಮೇಶ್ವರ ಎ.ಕೆ. : ವಸಂತ ಬಂದ** . ಪು. –20.
3. **ರಾಮೇಶ್ವರ ಎ.ಕೆ. : ವಸಂತ ಬಂದ** . ಪು. –26
4. **ರಾಮೇಶ್ವರ ಎ.ಕೆ. : ಬನ್ನಿರಿ ಮನುಕುಲ ಚಂದಿರರೆ** . ಪು.–11.

5. ರಾಮೇಶ್ವರ ಎ.ಕೆ. : ಹಕ್ಕಿ ಹಾರುತಿವೆ . ಪು.–21.
6. ರಾಮೇಶ್ವರ ಎ.ಕೆ. : ಹಕ್ಕಿ ಹಾರುತಿವೆ . ಪು.–47.
7. ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ . ಪು. –131.
8. ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ . ಪು.–220.
9. ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ . ಪು.–230.
10. ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ . ಪು.–258.
11. ರಾಮೇಶ್ವರ ಎ.ಕೆ.: ನಂದಿಕೋಲು . ಪು.–33.
12. ರಾಮೇಶ್ವರ ಎ.ಕೆ.: ನಂದಿಕೋಲು . ಪು.– 31.
13. ರಾಮೇಶ್ವರ ಎ.ಕೆ.: ವಸಂತ ಬಂದ . ಪು.– 19.
14. ರಾಮೇಶ್ವರ ಎ.ಕೆ. : ವಸಂತ ಬಂದ . ಪು.– 8.
15. ರಾಮೇಶ್ವರ ಎ.ಕೆ.: ಸಮಗ್ರ ಮಕ್ಕಳಕಾವ್ಯ . ಪು.– 131.
16. ಸ್ವಾಮಿರಾವ ಕುಲಕರ್ಣಿ (ಪ್ರ.ಸಂ.): ಸಂತೃಪ್ತಿ . ಪು.–151
17. ರಾಮೇಶ್ವರ ಎ.ಕೆ.: ಸಮಗ್ರ ಮಕ್ಕಳಕಾವ್ಯ . ಪು.– 179
18. ರಾಮೇಶ್ವರ ಎ.ಕೆ.: ಬನ್ನಿರಿ ಮನುಕುಲ ಚಂದಿರರೆ . ಪು.– 43
19. ರಾಮೇಶ್ವರ ಎ.ಕೆ.: ಹಕ್ಕಿ ಹಾರುತಿವೆ . ಪು. – 34
20. ರಾಮೇಶ್ವರ ಎ.ಕೆ.: ಹಕ್ಕಿ ಹಾರುತಿವೆ . ಪು. – 48